<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

<u>**SC No**.198/2021</u>

**PW**. 5

**CW**. 10

**ಸಾಕ್ಷಿಯ ಹೆಸರು –ಡಾ. ಪೂರ್ಣಿಮ ಜೆ**

**ಗಂಡನ ಹೆಸರು –ಡಾ, ಪ್ರಭು**

**ವಯಸ್ಸು –45 ವರ್ಷಗಳು** ದಿನಾಂಕ <u>18–03–2025</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವೈದ್ಯಾಧಿಕಾರಿಗಳು , ಸರ್ಕಾರಿ ಆಸ್ಪತ್ರೆ , ಹುಣಸೂರು**

**ವಾಸಸ್ಥಳ –ಹುಣಸೂರು**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ನಾನು ಕಳೆದ 5 ವರ್ಷಗಳಿಂದ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿಃ 25–06–2020 ರಂದು ಸಂಜೆ 7.15 ಗಂಟೆ ಸುಮಾರಿಗೆ ನಾನು ಆಸ್ಪತ್ರೆಯ ಕರ್ತವ್ಯದಲಿಲರುವಾಗ ಸಚೇನ ಎಂಬ ಗಾಯಾಳು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗೆ ನಮ್ಮ ಆಸ್ಪತ್ರೆಗೆ ಬಂದಿದ್ದು , ಆತನನ್ನು ಪರೀಕ್ಷೆ ಮಾಡಿ , ಚಿಕಿತ್ಸೆ ನೀಡಿದ್ದೇನೆ. ಆತನಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ತಲೆಯ ಬಲಭಾಗದ ಹಿಂಭಾಗದಲ್ಲಿ 2 x 0.5 ಸೆಂ ಮೀ ಅಗಲ , 6 x 1 ಸೆಂ ಮೀ ಅಳತೆಯ ಉದ್ದದ 'T' ಆಕಾರದ ಹರಿದ ಗಾಯ.

ಸದರಿ ಗಾಯಕ್ಕೆ ಪ್ರಾಥಮಿಕ ಚಿಕಿತ್ಸೆ ನೀಡಿ , ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ಆಸ್ಪತ್ರೆ ಮೈಸೂರಿಗೆ ಕಳುಹಿಸಿದ್ದು , ಅಲ್ಲಿ ಗಾಯಾಳುವಿನ ತಲೆಯ ಸಿಟಿ ಸ್ಕ್ಯಾನ್ ಮಾಡಿ , ಚಿಕಿತ್ಸೆ ನೀಡಿರುತ್ತಾರೆ. ಸದರಿ

ದಾಖಲೆಗಳನ್ನು ನೋಡಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸಿಟಿ ಸ್ಕ್ಯಾನ್ ಅನ್ನು ಪರಿಶೀಲಿಸಲಾಗಿ ಗಾಯಾಳುವಿನ ತಲೆಯ ಬಲಭಾಗದ ಹಿಂಭಾಗದ ಮೂಳೆ ಮುರಿತ ಕಂಡುಬಂದಿರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈ ನೋಡುತ್ತಿದ್ದು , ಅದನ್ನು ನಿಪಿ–13 ಎಂದು ಸಾಕ್ಷಿಯ ಸಹಿಯನ್ನು ನಿಪಿ–13(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ತೀವ್ರ ಸ್ವರೂಪದ ಗಾಯವಾಗಿತ್ತು.

ದಿಃ 10–11–2020 ರಂದು ಪೊಲೀಸರು ಗುದ್ದಲಿಯ ಜೊತೆ ಒಂದು ಮನವಿ ಸಲ್ಲಿಸಿ, ನನ್ನ ಹೆಚ್ಚುವರಿ ಅಭಿಪ್ರಾಯ ವರದಿ ಕೇಳಿದ್ದರು. ನಾನು ಸದರಿ ಗುದ್ದಲಿಯನ್ನು ಪರೀಕ್ಷೆ ಮಾಡಿ, ಸದರಿ ಗುದ್ದಲಿಯಿಂದ ಹೊಡೆದರೆ ನಿಪಿ–13 ರಲ್ಲಿ ನಮೂದು ಮಾಡಿರುವ ಗಾಯ ಆಗಬಹುದು ಎಂದು ವರದಿ ನೀಡಿದ್ದೇನೆ. ಸದರಿ ಹೆಚ್ಚುವರಿ ಅಭಿಪ್ರಾಯ ವರದಿಯನ್ನು ಈ ನೋಡುತ್ತಿದ್ದು, ಅದನ್ನು ನಿಪಿ–14 ಎಂದು ಸಾಕ್ಷಿಯ ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಗುದ್ದಲಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ಮು.ಮಾ–1 ರ ಗುದ್ದಲಿಯಿಂದ ಹೊಡೆದರೆ ‘T’ ಆಕಾರದ ಗಾಯ ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಹೆಚ್ಚು ಬಾರಿ ಹೊಡೆದರೆ ‘T’ ಆಕಾರದ ಗಾಯ ಆಗಬಹುದು ಎಂದು ಹೇಳುತ್ತಾರೆ. ಗಾಯಾಳುವಿನ ತಲೆಯ ಹಿಂಭಾಗದಲ್ಲಿದ್ದ ಗಾಯ ‘T’ ಆಕಾರದ ಗಾಯ ಎಂಬುದು ನನ್ನ ಅಭಿಪ್ರಾಯ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಸುಮಾರು 10–11 ಜನ ಇದ್ದರು ಎಂದು ಗಾಯಾಳು ಮಾಹಿತಿ ನೀಡಿದ್ದರು. ಗಾಯಾಳು ಅವರ ಹೆಸರುಗಳನ್ನು ನನ್ನ ಮುಂದೆ ಹೇಳಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ಮಾಡುವ ವ್ಯವಸ್ಥೆ ಇದೆ

ಎಂದರೆ ಸರಿಯಲ್ಲ. ಗಾಯಾಳುವನ್ನು ಕೆ ಆರ್ ಆಸ್ಪತ್ರೆ ಮೈಸೂರಿಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಗದ್ದಲದಲ್ಲಿ ಓಡಿ ಹೋಗುವಾಗ ಒಬ್ಬ ವ್ಯಕ್ತಿಯು ಬಲ ಮಗಲಾಗಿ ಚೂಪಾದ ವಸ್ತುಗಳ ಮೇಲೆ ಬಿದ್ದರೆ ನಿಪಿ–13 ರಲ್ಲಿ ನಮೂದು ಮಾಡಿರುವ ಗಾಯ ಆಗಬಹುದು ಎಂದರೆ ಸರಿ . ಪೊಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಗುದ್ದಲಿಯನ್ನು ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.